ಬಂದಮೇಲೆ ತಕ್ಷಣ ಇದರ ಬಗ್ಗೆ ತನಿಖೆ ಮಾಡಬೇಕು ಎಂದು ಹೇಳಿ ನಾನು ಜಿಲ್ಲಾಧಿಕಾರಿಯವರಿಗೆ ಆದೇಶ ಕೊಟ್ಟಿದ್ದೇನೆ. ಅವರಿಂದ ವರದಿ ಬಂದಮೇಲೆ ನಾವು ಆಕ್ಷನ್ ತೆಗೆದುಕೊಳ್ಳುತ್ತೇವೆ.

ಶ್ರೀ ಟಿ.ಬಿ. ಜಯಚಂದ್ರ.—ಆದರಲ್ಲಿ ಲೋಪದೋಷವಿದ್ದರೆ ಆ ಬಗ್ಗೆ ವಿಚಾರಣೆ ಮಾಡಿ, ಆದಕ್ಕೆ ನಮ್ಮ ಅಭ್ಯಂತರವೇನೂ ಇಲ್ಲ. ಆದರೆ ನನ್ನ ಒಂದು ಸಲಹೆ ಏನೆಂದರೆ ಈಗ ಹರಾಜು ಮಾಡಿರತಕ್ಕಂಥ ಪ್ರದೇಶದಲ್ಲಿ ಏನೂ ಗತಿಯಿಲ್ಲದೇ ಇರತಕ್ಕಂಥವರು ನೂರಾರು ವರ್ಷಗಳಿಂದ ಅನ್‌ಆಥರೈಸ್ಡ್ ಆಗಿ ಮನೆ ಕಟ್ಟಿಕೊಂಡು ವಾಸ ಮಾಡುತ್ತಾ ಬಂದಿದ್ದಾರೆ, ಅವರೆಲ್ಲರಿಗೂ ಸೈಟುಗಳನ್ನು ಕೊಡಿಸಿಕೊಡುವ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಧರ್ಮಸಿಂಗ್.—ಪುರಸಭೆಯವರು ಮಾಡುತ್ತಿದ್ದಾರೆ. ನಾವು ವ್ಯವಸ್ಥೆ ಮಾಡುತ್ತೇವೆ.

ಶ್ರೀ ಎಸ್. ಲಿಂಗಯ್ಯ.—ಸ್ವಾಮಿ, ಈಗ ಮಾನ್ಯ ಮಿತ್ರರಾದ ಶ್ರೀ ಜಯ ಚಂದ್ರರವರು ಹೇಳಿದರೀತಿಯನ್ನು ನೋಡಿದರೆ ಬಹಳವಂಟ್ಟಿಗೆ ಆ ಆಕ್ಷನ್‌ನಲ್ಲಿ ತಮಗೆ ಬೇಕುಬೇಕಾದವರಿಗೆ ಸೈಟುಗಳನ್ನು ಕೊಟ್ಟಿದ್ದಾರೆ ಎನ್ನುವ ಅಭಿಪ್ರಾಯ ವ್ಯಕ್ತವಾಗುತ್ತಿದೆ. ಆ ಆಕ್ಷನ್ ಇಟ್ಟರೀತಿಯನ್ನು ನೋಡಿದರೆ ಅವರು ರಿಕಾರ್ಡ್ ಸೃಷ್ಟಿ ಮಾಡಿ ಬೇಕುಬೇಕಾದವರಿಗೆ ಜಮೀನು ಇರತಕ್ಕಂಥವರಿಗೆ, ಮನೆ ಇರತಕ್ಕಂಥವರಿಗೆ ಸೈಟುಗಳನ್ನು ಕೊಟ್ಟಿದ್ದಾರೆ. ಇದನ್ನು ಕೂಲಂಕಷವಾಗಿ ತನಿಖೆ ಮಾಡಬೇಕು. ಇದಕ್ಕೆ ಸಂಬಂಧಪಟ್ಟಹಾಗೆ ಸಾರ್ವಜನಿಕರಿಂದ ನನಗೆ ಏನು ದೂರು ಬಂದಿದೆ ಇವನ್ನು ನಾನು ತಮ್ಮ ಮೂಲಕ ಮಾನ್ಯ ಸಚಿವರಿಗೆ ಕಳುಹಿಸಿಕೊಡುತ್ತೇನೆ.

ಅಧ್ಯಕ್ಷರು.—ಅದನ್ನು ನೀವು ಅವರಿಗೆ ಕಳುಹಿಸಿಕೊಡಿ. ಮಾನ್ಯ ಮಂತ್ರಿಯವರು ಅದನ್ನು ನೋಡುತ್ತಾರೆ.

ಶ್ರೀ ಧರ್ಮಸಿಂಗ್.—ಆಕ್ಷನ್ ಮಾಡಿದರೆ ಅದರಲ್ಲಿ ಯಾರಿಗಾದರೂ ದೊಡ್ಡವರಿಗೆ, ಸಣ್ಣವರಿಗೆ ಸೈಟ್ ಕೊಡಬೇಕು ಎನ್ನುವ ಪ್ರಶ್ನೆ ಬರುವುದಿಲ್ಲ. ಆ ಆಕ್ಷನ್‌ನಲ್ಲಿ ಯಾರು ಬರುತ್ತಾರೆ ಅವರು ಸೈಟ್ ತೆಗೆದುಕೊಳ್ಳುತ್ತಾರೆ. ಈ ಎನ್‌ಟೈರ್ ಮ್ಯಾಟರ್ ಏನಿದೆ ಇದರ ಬಗ್ಗೆ ಜಿಲ್ಲಾಧಿಕಾರಿಯವರು ಎನ್‌ಕ್ವೈರಿ ಮಾಡುತ್ತಿದ್ದಾರೆ. ಅವರಿಂದ ವರದಿ ಬಂದಮೇಲೆ ನಾವು ಸೂಕ್ತ ಕ್ರಮ ತೆಗೆದು ಕೊಳ್ಳುತ್ತೇವೆ.

Integrated Development Scheme Sponsored by the Central Government

1034. SRI M. SIDDAMADAIAH (Kollegal).—Will the Minister for House and Urban Development be pleased to state :—

(a) whether Kollegal Town would be included in the Integrated Development Scheme sponsored by the Central Government ;

(b) whether the Government would accord sanction for the Scheme facilitating improvement of roads, construction of Market Shopping Complex and dwelling houses under the Scheme ?

SRI DHARAM SINGH (Minister for Housing and Urban Development).—

(a) The Government of India has specified that 16 towns only are to be selected in Karnataka, for availing Central loan assistance under the Centrally Sponsored Scheme for Integrated Development of small and medium towns. The 16 towns have been selected already. Kollegal is not included in this list. Since the number of towns is restricted to 16 by the Government of India it will not be possible to include Kollegal Town.

(b) Under this programme, three components i.e., land acquisition and development for residential sites and traffic and transportation comprising of formation of new roads, improvement of existing roads and development of mandis/markets are eligible for Central Loan assistance. Since Kollegal Town is not included in the list of 16 selected towns, the sanctioning of schemes for Kollegal town coming under the purview of the components cited above does not arise.

ಶ್ರೀ ಎಂ. ಸಿದ್ದಮಾದಯ್ಯ.—ಕೊಳ್ಳೇಗಾಲ ನಗರವನ್ನು ಇಂಟಿಗ್ರೇಟೆಡ್ ಡೆವಲಪ್‌ಮೆಂಟ್ ಸ್ಕೀಮ್ ಎಂಬ ಕೇಂದ್ರ ಸರ್ಕಾರದ ಯೋಜನೆಗೆ ಸೇರಿಸಿಕೊಳ್ಳಲಾಗುವುದೆ ಎಂದು ನಾನು ಪ್ರಶ್ನೆ ಕೇಳಿದ್ದೇನೆ. ಇದರಲ್ಲಿ ಸುಮಾರು ೧೬ ಪಟ್ಟಣಗಳನ್ನು ಮಾತ್ರ ಸೇರಿಸಿದ್ದೇವೆಂದು ಹೇಳುತ್ತಿದ್ದಾರೆ. ಈ ೧೬ ಪಟ್ಟಣಗಳು ಯಾವುದು. ಕೊಳ್ಳೇಗಾಲ ನಗರವನ್ನು ಕೈಬಿಡಲಿಕ್ಕೆ ಕಾರಣ ಏನು ?

ಶ್ರೀ ಧರ್ಮಸಿಂಗ್.—ಇಂಟಿಗ್ರೇಟೆಡ್ ಡೆವಲಪ್‌ಮೆಂಟ್ ಸ್ಕೀಮ್‌ನಲ್ಲಿ ಕೊಳ್ಳೇಗಾಲ ಸೇರಿಲ್ಲ' ಈಗಾಗಲೇ ೧೬ ಪಟ್ಟಣಗಳನ್ನು ಆಯ್ಕೆ ಮಾಡಲಾಗಿದೆ. ಪ್ರಪ್ರಥಮವಾಗಿ ನಾನು ಬಂದ ನಂತರ ಸೈಟ್‌ಲೆಸ್ ಜನರಿಗೆ ಸೈಟು ಕೊಡತಕ್ಕದ್ದು, ಮಾರ್ಕೆಟ್, ಷಾಪಿಂಗ್ ಕಾಂಪ್ಲೆಕ್ಸ್, ರಿಂಗ್ ರೋಡ್ಸ್, ಎಲ್ಲೆಲ್ಲಿ ಅವಶ್ಯಕತೆ ಇದೆ ಅಲ್ಲಿ ಕೊಡಬೇಕೆಂದು ಮಾಡಿದ್ದೇನೆ. ನಾವು ಈ ಯೋಜನೆಯಲ್ಲಿ ಸೇರಿಸಿರತಕ್ಕ ಪಟ್ಟಣಗಳು ಅಂದರೆ, ಚನ್ನಪಟ್ಟಣ, ಚಿತ್ರದುರ್ಗ, ಹಾಸನ, ಹೊಸಪೇಟೆ, ಕನಕಪುರ, ಮಾಗಡಿ, ರಾಯಚೂರು, ತುಮಕೂರು, ಹೊಳೇನರಸೀಪುರ, ಹುಮ್ನಾಬಾದ್, ಕುಶಾಲನಗರ, ಸಾಗರ್, ಶಹಾಪುರ್, ಜಮಖಂಡಿ, ಕಾರ್ಕಳ, ಈ ರೀತಿ ಒಟ್ಟು ೧೬ ಪಟ್ಟಣಗಳು ಸೇರಿವೆ. ೧೯೮೨-೮೩ರಲ್ಲಿ ೨೦ ಪಟ್ಟಣಗಳಿಗೆ ಕೊಡುತ್ತಿದ್ದೇವೆ. ೫೦ ಪರ್‌ಸೆಂಟ್ ಸೆಂಟ್ರಲ್ ಗವರ್ನ್‌ಮೆಂಟ್ ಕೊಡುತ್ತಾರೆ, ೫೦ ಪರ್‌ಸೆಂಟ್ ಸ್ಟೇಟ್ ಗವರ್ನ್‌ಮೆಂಟ್ ಕೊಡುತ್ತದೆ. ಪಟ್ಟಣಗಳನ್ನು ಚೆನ್ನಾಗಿ ಡೆವಲಪ್ ಮಾಡತಕ್ಕ ರೀತಿಯಲ್ಲಿ ಸ್ಕೀಮ್ ಇದೆ, ಮುಂದೆ ತೆಗೆದುಕೊಳ್ಳುವಾಗ, ಕೊಳ್ಳೇಗಾಲ ತೆಗೆದುಕೊಳ್ಳಲಿಕ್ಕೆ ವಿಚಾರ ಮಾಡಬೇಕಾಗುತ್ತದೆ.

ಶ್ರೀ ಜಿ. ರಾಜೂಗೌಡ.—೧೬ ಪಟ್ಟಣಗಳನ್ನು ಆಯ್ಕೆ ಮಾಡಬೇಕಾದರೆ ತಾವು ಯಾವ ಆಳತೆಗೋಲು ಇಟ್ಟುಕೊಂಡಿದ್ದೀರಾ ?

ಶ್ರೀ ಧರ್ಮಸಿಂಗ್.—ಒಂದೊಂದು ಜಿಲ್ಲೆಯಲ್ಲೂ ಎಷ್ಟೆಷ್ಟು ಜನಸಂಖ್ಯೆ ಇದೆ, ೨ ಸಾವಿರ ಕ್ಕಿಂತಲೂ ಹೆಚ್ಚಿಗೆ ಪಾಪ್ಯುಲೇಷನ್ ಎಲ್ಲಿ ಆಗಿಂತ್ತಿದೆ. ಯಾವ ಪಟ್ಟಣಕ್ಕೆ ಹೆಚ್ಚು ಪ್ರಾಶಸ್ತ್ಯ ಕೊಡ ಬೇಕು, ಅದರ ಬಗ್ಗೆ ವಿಚಾರ ಮಾಡಲಿಕ್ಕೆ ಡೈರೆಕ್ಟರ್ ಆಫ್ ಟೌನ್ ಪ್ಲಾನಿಂಗ್ ಅವರಲ್ಲಿ ಒಂದು ಸಮಿತಿ ಇದೆ, ಅವರ ರಿಪೋರ್ಟ್ ಪ್ರಕಾರ ಆಯ್ಕೆ ಮಾಡಲಾಗಿದೆ.

ಶ್ರೀ ಜಿ. ರಾಜೂಗೌಡ.—ಮೈಸೂರು ಜಿಲ್ಲೆ ಕೊಳ್ಳೇಗಾಲ ತಾಲ್ಲೂಕಿನಲ್ಲಿ ಹೆಚ್ಚಿನ ಜನಸಂಖ್ಯೆ ಇರುವುದು ತಮಗೆ ಗೊತ್ತಿದೆಯೇ ?

ಶ್ರೀ ಧರ್ಮಸಿಂಗ್.—ಮೊಟ್ಟಮೊದಲನೆಯದಾಗಿ ೧೯೮೧-೮೨ರಲ್ಲಿ ೧೬ ಪಟ್ಟಣಗಳಿಗೆ ಕೊಟ್ಟಿದ್ದೇವೆ, ೧೯೮೨-೮೩ರಲ್ಲಿ ಉಳಿದ ಪಟ್ಟಣಗಳನ್ನು ತೆಗೆದುಕೊಳ್ಳುತ್ತೇವೆ. ಈ ರೀತಿ ಪ್ರತಿವರ್ಷ ತೆಗೆದುಕೊಳ್ಳುತ್ತಿರುತ್ತೇವೆ.

ಶ್ರೀ ಎಂ. ಸಿದ್ದಮಾದಯ್ಯ.—ಕೊಳ್ಳೇಗಾಲವನ್ನು ಈ ವರ್ಷದಲ್ಲಿ ತೆಗೆದುಕೊಳ್ಳಲಿಕ್ಕೆ ವ್ಯವಸ್ಥೆ ಮಾಡುತ್ತೀರಾ ?

ಶ್ರೀ ಧರ್ಮಸಿಂಗ್.—ಮಾಡೋಣ.